QUIZIZZ

## 06.ಛಲಮನೆ ಮೆರೆವೆಂ : ಭಾಗ-02

25 Questions

NAME : ____________________

CLASS : ____________________

DATE : ____________________

1. "ಸಮರದೊಳೆನಗಜ್ಜ ಪೇಳಿಮಾವುದು ಕಜ್ಜಂ"(ಅಜ್ಜ ಯುದ್ಧದಲ್ಲಿ ನಾನು ಮಾಡಬೇಕಾದ ಕಾರ್ಯ ಯಾವುದು ಹೇಳಿ) ಎಂದು ಯಾರು ಯಾರಿಗೆ ಹೇಳಿದರು ?

- ☐ a) ದುರ್ಯೋಧನ - ಭೀಷ್ಮರಿಗೆ
- ☐ b) ಭೀಷ್ಮರು - ದುರ್ಯೋಧನನಿಗೆ
- ☐ c) ಭೀಷ್ಮರು - ಪಾಂಡವರಿಗೆ
- ☐ d) ಕರ್ಣ - ಕೃಷ್ಣನಿಗೆ

2. "ಪಾಂಡವರಲ್ಲಿ ಸಂಧಿಯನ್ನು ಮಾಡಿಸಲೆಂದು ಬಂದಿನೇ" ಎಂದು ಯಾರು ಯಾರಿಗೆ ಹೇಳಿದರು ?

- ☐ a) ಭೀಷ್ಮರು - ದುರ್ಯೋಧನನಿಗೆ
- ☐ b) ದುರ್ಯೋಧನ - ಭೀಷ್ಮರಿಗೆ
- ☐ c) ದುರ್ಯೋಧನ - ಧರ್ಮರಾಯನಿಗೆ
- ☐ d) ದೃತರಾಷ್ಟ್ರ - ದುರ್ಯೋಧನನಿಗೆ

3. "ನೆಲಕಿರಿವೆನೆಂದು ಬಗೆದಿರೆ ಛಲಕಿರಿವೆಂ"(ನೆಲಕ್ಕಾಗಿ ಹೋರಾಡುತ್ತಿದ್ದೇನೆ ಎಂದು ಭಾವಿಸಿದ್ದೀರಾ ಇಲ್ಲ ಛಲಕೋಸ್ಕರ ಹೋರಾಡುತ್ತಿದ್ದೇನೆ) ಎಂದು ದುರ್ಯೋಧನ ಯಾರಿಗೆ ಹೇಳಿದನು ?

- ☐ a) ಧೃತರಾಷ್ಟ್ರನಿಗೆ
- ☐ b) ಕರ್ಣನಿಗೆ
- ☐ c) ಧರ್ಮರಾಯನಿಗೆ
- ☐ d) ಭೀಷ್ಮರಿಗೆ

4. ದುರ್ಯೋಧನ ಯಾವುದಕ್ಕೋಸ್ಕರ ಹೋರಾಡುತ್ತೇನೆ ಎಂದು ಭೀಷ್ಮರಿಗೆ ಹೇಳಿದನು ?

- ☐ a) ನೆಲಕ್ಕೋಸ್ಕರ
- ☐ b) ಛಲಗೋಸ್ಕರ
- ☐ c) ಸ್ನೇಹಿತನಿಗೋಸ್ಕರ
- ☐ d) ಮಕ್ಕಳಿಗೋಸ್ಕರ

5. ದಿನಪಸುತ ಎಂದರೆ ಯಾರು ?

- ☐ a) ಕರ್ಣ
- ☐ b) ಅರ್ಜುನ
- ☐ c) ಭೀಷ್ಮ
- ☐ d) ದುರ್ಯೋಧನ

6. ದುರ್ಯೋಧನ ಯಾವ ನೆಲದೊಡನೆ ಮತ್ತೆ ಹೊಂದಿಕೊಂಡು ಬಾಳುವುದು ಸಾಧ್ಯವಿಲ್ಲ ಎಂದು ಹೇಳುತ್ತಾನೆ ?

- ☐ a) ಧರ್ಮರಾಯನನ್ನು ಕೊಲ್ಲಿಸಿದ ನೆಲದೊಡನೆ
- ☐ b) ದ್ರೋಣರನ್ನು ಕೊಲ್ಲಿಸಿದ ನೆಲದೊಡನೆ
- ☐ c) ಕರ್ಣನನ್ನು ಕೊಲ್ಲಿಸಿದ ನೆಲದೊಡನೆ
- ☐ d) ದ್ರುಪದನನ್ನು ಕೊಲ್ಲಿಸಿದ ನೆಲದೊಡನೆ

7. ದುರ್ಯೋಧನ ಯಾರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ಹೇಳುತ್ತಾನೆ ?

- ☐ a) ಕರ್ಣ - ದುಶ್ಯಾಸನರನ್ನು
- ☐ b) ಪಾರ್ಥ -ಭೀಮರನ್ನು
- ☐ c) ನಕುಲ - ಸಹದೇವರನ್ನು
- ☐ d) ದ್ರೋಣ - ದ್ರುಪದರನ್ನು

8. ದುರ್ಯೋಧನನ ಪ್ರೀತಿಯ ಸ್ನೇಹಿತ ಮತ್ತು ಪ್ರೀತಿಯ ತಮ್ಮ ಯಾರು ?

- ☐ a) ಅರ್ಜುನ ಮತ್ತು ಭೀಮ
- ☐ b) ಕೃಷ್ಣ ಮತ್ತು ಕರ್ಣ
- ☐ c) ಕರ್ಣ ಮತ್ತು ದುಶ್ಯಾಸನ
- ☐ d) ದ್ರೋಣ ಮತ್ತು ಅಶ್ವತ್ಥಾಮ

9. ಅಂತಕಾತ್ಮಜ ಎಂದರೆ ಯಾರು?

- ☐ a) ಕರ್ಣ
- ☐ b) ಸುಯೋಧನ
- ☐ c) ಅರ್ಜುನ
- ☐ d) ಯುಧಿಷ್ಠಿರ

10. ದುರ್ಯೋಧನ ಕೊನೆಯಲ್ಲಿ ಯಾರೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತೇನೆ ಎಂದು ಹೇಳುತ್ತಾನೆ?

- ☐ a) ಅರ್ಜುನ
- ☐ b) ಭೀಮ
- ☐ c) ನಕುಲ-ಸಹದೇವ
- ☐ d) ಧರ್ಮರಾಜ

11. ದುರ್ಯೋಧನ ತನ್ನಲ್ಲಿ ಕೋಪ ಅಧಿಕವಾಗಿದ್ದು ಏಕೆ ಎಂದು ಹೇಳುತ್ತಾನೆ ?

- ☐ a) ತನ್ನ ಸಹೋದರರು ಮತ್ತು ಮಕ್ಕಳು ಸತ್ತಿದ್ದರಿಂದ
- ☐ b) ದ್ರೋಣಾಚಾರ್ಯರು ಶರಶೈಯ್ಯೆಯಲ್ಲಿ ಮಲಗಿದ್ದರಿಂದ
- ☐ c) ಧರ್ಮರಾಯ ಸಂಧಿಗೆ ಒಪ್ಪದೇ ಇರುವುದರಿಂದ
- ☐ d) ಭೀಷ್ಮರು ಸಂಧಿಯ ಮಾತು ಹೇಳಿದ್ದರಿಂದ

12. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವರು ಯಾರು?

- ☐ a) ಕರ್ಣ
- ☐ b) ಸುಯೋಧನ
- ☐ c) ಭೀಮ
- ☐ d) ಅರ್ಜುನ

13. "ಪಾಂಡವರೊಳಿರಿದು ಛಲಮನೆ ಮೆರೆವೆಂ" (ಪಾಂಡವರೊಡನೆ ಹೋರಾಡಿ ಛಲವನ್ನೇ ಮೆರೆಯುತ್ತೇನೆ) ಎಂದು ಯಾರಿಗೆ ಯಾರು ಹೇಳಿದರು ?

☐ a) ಕರ್ಣನಿಗೆ - ದುರ್ಯೋಧನ
☐ b) ಧೃತರಾಷ್ಟ್ರನಿಗೆ - ದುರ್ಯೋಧನ
☐ c) ಭೀಷ್ಮರಿಗೆ - ದುರ್ಯೋಧನ
☐ d) ಪಾರ್ಥನಿಗೆ - ಭೀಮ

14. ದುರ್ಯೋಧನ ಯಾರೊಡನೆ ಹೋರಾಡುತ್ತೇನೆ ಎಂದು ಭೀಷ್ಮರಿಗೆ ಹೇಳುತ್ತಾನೆ ?

☐ a) ಪಾಂಡವರೊಡನೆ
☐ b) ಯಾದವರೊಡನೆ
☐ c) ಕರ್ಣ- ದುಶ್ಯಾಸನರೊಡನೆ
☐ d) ಕೌರವರೊಡನೆ

15. "ನೆಲಕಿರಿವೆನೆಂದು ಬಗೆದಿರೆ ಛಲಕಿರಿವೆಂ"(ನೆಲಕ್ಕಾಗಿ ಹೋರಾಡುತ್ತಿದ್ದೇನೆ ಎಂದು ಭಾವಿಸಿದ್ದೀರಾ ಇಲ್ಲ ಛಲಕೋಸ್ಕರ ಹೋರಾಡುತ್ತಿದ್ದೇನೆ) ಈ ವಾಕ್ಯದಲ್ಲಿ ಕಂಡುಬರುವ ಸ್ವಾರಸ್ಯ

☐ a) ನೆಲಕ್ಕಿಂತ ಛಲವೆ ಮುಖ್ಯವೆಂಬುದು
☐ b) ಛಲಕ್ಕಿಂತ ನೆಲವೇ ಮುಖ್ಯವೆಂಬುದು
☐ c) ನೆಲ ಮತ್ತು ಛಲ ಎರಡು ಮುಖ್ಯವೆಂಬುದು
☐ d) ಛಲ ಮತ್ತು ನೆಲ ಎರಡು ಮುಖ್ಯವಲ್ಲವೆಂಬುದು

16. "ಮೇಣಾಯ್ತು ಕೌರವಂಗವನಿತಳಂ" -ಈ ವಾಕ್ಯವನ್ನು ಯಾರು ಹೇಳಿದರು ?

☐ a) ಧರ್ಮರಾಯ
☐ b) ಭೀಷ್ಮಾಚಾರ್ಯರು
☐ c) ಪಾರ್ಥ - ಭೀಮರು
☐ d) ದುರ್ಯೋಧನ

17. ಕರ್ಣ ಮತ್ತು ದುಶ್ಯಾಸನರನ್ನು ಕೊಂದವರು ಯಾರು ?

☐ a) ಪಾರ್ಥ - ಭೀಮರು
☐ b) ಭೀಷ್ಮಾಚಾರ್ಯರು
☐ c) ಧೃತರಾಷ್ಟ್ರ
☐ d) ಧರ್ಮರಾಯ

18. ಅರ್ಜುನನಿಗೆ ಸರಿಹೊಂದದ ಹೆಸರು ಯಾವುದು?

☐ a) ಅಂತಕಾತ್ಮಜ
☐ b) ಗಾಂಡೀವಿ
☐ c) ಫಲ್ಗುಣ
☐ d) ಪಾರ್ಥ

19. ಯಮನ ಮಗ ಯಾರು?

- ☐ a) ಅರ್ಜುನ
- ☐ b) ಭೀಮಾ
- ☐ c) ಯುಧಿಷ್ಠಿರ
- ☐ d) ಕರ್ಣ

20. ಅಣುಗಾಳ್ ಪದದ ಅರ್ಥ ತಿಳಿಸಿ.

- ☐ a) ಒಪ್ಪಂದ
- ☐ b) ಒಡಹುಟ್ಟಿದವರು
- ☐ c) ರುವಾರಿ
- ☐ d) ಪ್ರೀತಿಯ ಗೆಳೆಯ

21. ನೀನು ಒಪ್ಪುವೆಯಾದರೆ ಪಾಂಡವರೊಡನೆ ಸಂಧಿಯನ್ನು ಮಾಡಿಸಿ ಮೊದಲ ರೀತಿಯಲ್ಲಿ ಇರುವಂತೆ ಮಾಡುತ್ತೇನೆ ಎಂದು ದುರ್ಯೋಧನನಿಗೆ ಹೇಳಿದವರು ?

- ☐ a) ಕರ್ಣ
- ☐ b) ಭೀಷ್ಮಾಚಾರ್ಯರು
- ☐ c) ಧರ್ಮರಾಯ
- ☐ d) ದೃತರಾಷ್ಟ್ರ

22. ದುರ್ಯೋಧನ ಭೀಷ್ಮಾಚಾರ್ಯರಿಗೆ ಹೇಳಿದ ಸರಿಯಾದ ವಾಕ್ಯ

- ☐ a) ನಾನು ಛಲಕೋಸ್ಕರ ಹೋರಾಡುತ್ತಿದ್ದೇನೆ.
- ☐ b) ನನ್ನ ದೇಹದಲ್ಲಿ ಪ್ರಾಣ ಇರುವವರಿಗೆ ಸಂಧಿಯನ್ನು ಮಾಡಿಕೊಳ್ಳುವುದಿಲ್ಲ.
- ☐ c) ದಿನಪಸುತನನ್ನು ಕೊಲ್ಲಿಸಿದ ಈ ನೆಲ ನನಗೆ ಹಾಳು ಬಿದ್ದ ನೆಲ.
- ☐ d) ಇಲ್ಲಿ ಹೇಳಿರುವ ಎಲ್ಲಾ ವಾಕ್ಯಗಳು ಸರಿ

23. ದುರ್ಯೋಧನ ಈ ನೆಲದೊಡನೆ ಸಹಬಾಳ್ವೆ ಮಾಡುವುದಿಲ್ಲವೆಂದು ಕೇಳಲು ಕಾರಣ

- ☐ a) ಈ ನೆಲ ದಿನಪಸುತನಂ ಕೊಲ್ಲಿಸಿದ ನೆಲವಾಗಿದ್ದರಿಂದ
- ☐ b) ಛಲಕೋಸ್ಕರ ಹೋರಾಡುತ್ತಿರುವುದುರಿಂದ
- ☐ c) ಕರ್ಣ ಇಲ್ಲದ ನೆಲ ಪಾಳ್ ನೆಲ ಆಗಿರುವುದರಿಂದ
- ☐ d) ಈ ಎಲ್ಲಾ ಕಾರಣಗಳಿಂದ

24. ದುರ್ಯೋಧನ ಯಾರೊಂದಿಗೆ ಛಲವನ್ನು ತೋರಿಸುತ್ತಾನೆ.

- ☐ a) ಪಾಂಡವರೊಂದಿಗೆ
- ☐ b) ಕೃಷ್ಣನೊಂದಿಗೆ
- ☐ c) ದ್ರುಪದನೊಂದಿಗೆ
- ☐ d) ಕರ್ಣನೊಂದಿಗೆ

25. ದುರ್ಯೋಧನನ ತಂದೆ-ತಾಯಿಗಳ ಹೆಸರು

- ☐ a) ಜಿನವಲ್ಲಭ - ಅಬ್ಬಲಬ್ಬೆ
- ☐ b) ಧೃತರಾಷ್ಟ್ರ - ಗಾಂಧಾರಿ
- ☐ c) ಪಾಂಡುರಾಜ - ಕುಂತಿ
- ☐ d) ಪಾಂಡುರಾಜ - ಮಾದ್ರಿ

## Answer Key

1. a
2. b
3. d
4. b
5. a
6. c
7. b
8. c
9. d
10. d
11. a
12. b
13. c
14. a
15. a
16. d
17. a
18. a
19. c
20. d
21. b
22. d
23. d
24. a
25. b